೧

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 13 (70) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27-01-2026 |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜವಳಿ ಕ್ಷೇತ್ರವನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಹೊಸ ನೀತಿಗಳು ಯಾವುವು; | 2019-24ರ ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿಯು ದಿನಾಂಕ:03-11-2024 ರವರೆಗೆ ಚಾಲ್ತಿಯಲ್ಲಿದ್ದು, ಸರ್ಕಾರದ ಪತ್ರ ಸಂಖ್ಯೆ: CI 34 JAKY 2024, ದಿನಾಂಕ:14-11-2024 ರಲ್ಲಿ ಹೊಸ ಜವಳಿ ನೀತಿ 2025-30ರ ಘೋಷಣೆಯಾಗುವವರೆಗೂ ಚಾಲ್ತಿಯಲ್ಲಿರುವ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ನ್ನು ಮುಂದುವರೆಸಲಾಗಿರುತ್ತದೆ.<br><br>2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-328 ರಲ್ಲಿ "ರಾಜ್ಯದಲ್ಲಿ ಜವಳಿ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜಿಸಲು 2024-29ರ ಅವಧಿಗೆ 10,000 ಕೋಟಿ ರೂ. ಗಳ ಬಂಡವಾಳ ಹೂಡಿಕೆ ಹಾಗೂ 2 ಲಕ್ಷ ಉದ್ಯೋಗಗಳ ಸೃಜನೆಯ ಗುರಿಯೊಂದಿಗೆ ಹೊಸ ಜವಳಿ ನೀತಿಯನ್ನು ಜಾರಿಗೊಳಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.<br><br>2025-26 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ:352ರಲ್ಲಿ "ರಾಜ್ಯದಲ್ಲಿ ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು ಎರಡು ಲಕ್ಷ ಉದ್ಯೋಗ ಸೃಜಿಸುವ ಉದ್ದೇಶದಿಂದ ನೂತನ ಜವಳಿ ನೀತಿ 2025-30ನ್ನು ರೂಪಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.<br><br>ಪ್ರಸ್ತುತ ಜವಳಿ ಕ್ಷೇತ್ರದ ಉದ್ದಿಮೆದಾರರು, ನೇಕಾರರು ಹಾಗೂ ನೇಕಾರರ ಸಾಂದ್ರತೆಯಿರುವ ಪ್ರದೇಶದ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಪಡೆದುಕೊಂಡು ಕರಡು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2025-30 ನ್ನು ಸಿದ್ಧಪಡಿಸಲಾಗಿದ್ದು, ಶೀಘ್ರದಲ್ಲೇ ಅನುಷ್ಠಾನಗೊಳಿಸಲಾಗುವುದು. |
| ಆ) | ರಾಜ್ಯದಲ್ಲಿ ಜವಳಿ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ನೀಡುತ್ತಿರುವ ಸಬ್ಸಿಡಿಗಳು ಯಾವುವು; | ರಾಜ್ಯದಲ್ಲಿನ ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆಗಳಿಗೆ ಹಾಲಿ ಜಾರಿಯಲ್ಲಿರುವ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಡಿ ಸರ್ಕಾರದ ವತಿಯಿಂದ ಕೆಳಕಂಡ ಸಬ್ಸಿಡಿಗಳನ್ನು ನೀಡಲಾಗುತ್ತಿದೆ.<br><br>• ಸಾಲಾಧಾರಿತ ಬಂಡವಾಳ ಸಹಾಯಧನ – 10% ರಿಂದ 30% ವರೆಗೆ (ಒಟ್ಟು ಬಂಡವಾಳ ಹೂಡಿಕೆಯ ಮೇಲೆ). |

...2

| | | |
|---|---|---|
| | | • **ಬಡ್ಡಿ ಸಹಾಯಧನ**- ಮಧ್ಯಮ ಹಾಗೂ ಲಾರ್ಜ್ ಜವಳಿ/ಸಿದ್ಧ ಉಡುಪು ಘಟಕಗಳಿಗೆ ಮೊದಲ 05 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇ.5 ರಷ್ಟು ಬಡ್ಡಿ ಸಹಾಯಧನ.<br>• **ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ**- ಅತಿ ಸಣ್ಣ ಮತ್ತು ಸಣ್ಣ ಘಟಕಗಳಿಗೆ ಪ್ರತಿ ಯುನಿಟ್‌ಗೆ ರೂ.1/- ರಿಂದ 2/-ರಂತೆ ವಿದ್ಯುತ್ ವೆಚ್ಚದ ಮರುಪಾವತಿ.<br>• **ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ** (ಶೇ.75 ರಷ್ಟು ಮಾಲೀಕರ ವಂತಿಕೆ ಮರುಪಾವತಿ)<br>• **ವೇತನ ಸಹಾಯಧನ** - ಸಿದ್ಧ ಉಡುಪು ಘಟಕಗಳಿಗೆ ಪ್ರತಿ ಕಾರ್ಮಿಕರಿಗೆ ರೂ2,000/- ರಿಂದ ರೂ.3,000/- ವೇತನ ಸಹಾಯಧನ<br>• **ಮುದ್ರಾಂಕ ಶುಲ್ಕ ವಿನಾಯಿತಿ** - ಶೇ.100 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ & ಪ್ರತಿ ರೂ.1,000/-ಕ್ಕೆ ರೂ.1/-ರ ದರದಲ್ಲಿ ನೋಂದಣಿ ಶುಲ್ಕ ರಿಯಾಯಿತಿ.<br>• **ತ್ಯಾಜ್ಯ ವಿಲೇವಾರಿ ಘಟಕಕ್ಕೆ** ಶೇ.50 ರಷ್ಟು ಸಹಾಯಧನ ಅಥವಾ ಗರಿಷ್ಠ ರೂ.5.00 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅದು.<br>• ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರ ಸಂಘ / ಸಂಸ್ಥೆ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (SME) ಘಟಕವನ್ನು ಪ್ರಾರಂಭಿಸುವುದನ್ನು ಉತ್ತೇಜಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಇಲಾಖೆಯಿಂದ SCSP / TSP – SME ಘಟಕಗಳ ಸ್ಥಾಪನೆ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜವಳಿ ಉದ್ಯಮಶೀಲರು ಹೊಸದಾಗಿ ಸ್ಥಾಪಿಸುವ ಎಸ್.ಎಂ.ಇ ಜವಳಿ ಘಟಕಗಳಿಗೆ ಗರಿಷ್ಠ ಶೇ.75 ರಷ್ಟು ಅಥವಾ ಗರಿಷ್ಠ ರೂ.200.00 ಲಕ್ಷಗಳ ಸಹಾಯಧನ ಒದಗಿಸಲು ಅವಕಾಶವಿರುತ್ತದೆ. |
| ಇ) | ತಮಿಳುನಾಡು ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳು ಜವಳಿ ಕೈಗಾರಿಕೆಗಳಿಗೆ ಹೆಚ್ಚಿನ ವಿದ್ಯುತ್ ಸಬ್ಸಿಡಿಗಳನ್ನು ನೀಡುತ್ತಿರುವುದು ನಿಜವೇ; ಹಾಗಿದ್ದಲ್ಲಿ ರಾಜ್ಯದಲ್ಲಿ ಜವಳಿ ಕೈಗಾರಿಕೆಗಳಲ್ಲಿ ಸಮಾನಾಂತರ ಸಬ್ಸಿಡಿಗಳನ್ನು ನೀಡಲು ಆಗುತ್ತಿರುವ ಅಡಚಣೆಗಳೇನು; | • ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಜವಳಿ ಕೈಗಾರಿಕೆಗಳಿಗೆ ನೀಡಲಾಗುತ್ತಿರುವ ವಿದ್ಯುತ್ ಸಹಾಯಧನ ವಿವರಗಳನ್ನು **ಅನುಬಂಧ-01** ರಲ್ಲಿ ಒದಗಿಸಲಾಗಿದೆ.<br>• ನೂತನ ಜವಳಿ ಹಾಗೂ ಸಿದ್ದ ಉಡುಪು ನೀತಿ-2019-24 ರಡಿ ಜವಳಿ ಹಾಗೂ ಸಿದ್ದ ಉಡುಪು ಘಟಕಗಳಿಗೆ ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ ಅತಿ ಸಣ್ಣ ಮತ್ತು ಸಣ್ಣ ಘಟಕಗಳಿಗೆ ಪ್ರತಿ ಯುನಿಟ್‌ಗೆ ರೂ.1/- ರಿಂದ 2/-ರಂತೆ ವಿದ್ಯುತ್ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.<br>**ನೇಕಾರರ ಪ್ಯಾಕೇಜ್**:-<br>• 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ. |

| | | |
|---|---|---|
| | | • 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ.<br><br>**ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ – ವಿಶೇಷ ಘಟಕ / ಗಿರಿಜನ ಉಪ ಯೋಜನೆ:-**<br><br>• 20 ಹೆಚ್.ಪಿ ಇಂದ 200 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ SCSP / TSP ವಿದ್ಯುತ್ ಮಗ್ಗ ಘಟಕಗಳಿಗೆ Energy Charges ನಲ್ಲಿ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುತ್ತಿದೆ. |
| ಈ) | ಜವಳಿ ನೀತಿ 2025–2030 ರಡಿ ರಾಜ್ಯದಲ್ಲಿ ನಿರುದ್ಯೋಗಿಗಳಿಗೆ ಸುಮಾರು 2 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು ಯೋಜಿಸಿದ್ದು, ಈ ಯೋಜನೆಯ ಪ್ರಸ್ತುತ ಹಂತವೇನು? | 2024–25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ–328 ರಲ್ಲಿ "ರಾಜ್ಯದಲ್ಲಿ ಜವಳಿ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜಿಸಲು **2024–29**ರ ಅವಧಿಗೆ **10,000** ಕೋಟಿ ರೂ. ಗಳ ಬಂಡವಾಳ ಹೂಡಿಕೆ ಹಾಗೂ **2** ಲಕ್ಷ ಉದ್ಯೋಗಗಳ ಸೃಜನೆಯ ಗುರಿಯೊಂದಿಗೆ ಹೊಸ ಜವಳಿ ನೀತಿಯನ್ನು ಜಾರಿಗೊಳಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.<br><br>2025–26 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ:352ರಲ್ಲಿ "ರಾಜ್ಯದಲ್ಲಿ ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು ಎರಡು ಲಕ್ಷ ಉದ್ಯೋಗ ಸೃಜಿಸುವ ಉದ್ದೇಶದಿಂದ ನೂತನ ಜವಳಿ ನೀತಿ **2025–30** ನ್ನುರೂಪಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.<br><br>ಕರಡು New Textile and Apparel Policy 2025-30 ನ್ನು ರೂಪಿಸಲುಸಿದ್ಧ ಪಡಿಸಿದ್ದು, ಮಾನ್ಯ ಜವಳಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿದ್ದು, ಶೀಘ್ರದಲ್ಲಿಯೇ ಜವಳಿ ನೀತಿಯನ್ನು ಜಾರಿಗೊಳಿಸಲಾಗುವುದು.<br><br>ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: CI 15 JAKE 2026**

**(ಶಿವಾನಂದ ಎಸ್. ಪಾಟೀಲ)**

**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**

## ಅನುಬಂಧ-1

### ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ:-

**ತಮಿಳು ನಾಡು:-**

ತಮಿಳು ನಾಡು ರಾಜ್ಯದಲ್ಲಿ ಜವಳಿ ಕೈಗಾರಿಕಾ ಘಟಕಗಳಿಗೆ Tamil New Integrated Textile Policy 2019 ರಡಿ ವಿದ್ಯುತ್‌ನ್ನು ಖರೀದಿಸಿರುವುದಕ್ಕೆ 5 ವರ್ಷಗಳ ವರೆಗೆ Electricity Tax exemptionನ್ನು ನೀಡಲಾಗುತ್ತಿದೆ.

ಕೈಮಗ್ಗ ನೇಕಾರರ ಮನೆಗಳಿಗೆ ಉಚಿತ ವಿದ್ಯುತ್ ಸರಬರಾಜು ಯೋಜನೆ ನೇಕಾರರ ಮನೆಗಳಿಗೆ 300 ಯೂನಿಟ್‌ಗಳಷ್ಟು ಪ್ರತಿ ಎರಡು ತಿಂಗಳಿಗೊಮ್ಮೆ ವಿದ್ಯುತ್ ಸರಬರಾಜು.

ವಿದ್ಯುತ್ ನೇಕಾರರ ಮನೆಗಳಿಗೆ ಉಚಿತ ವಿದ್ಯುತ್ ಸರಬರಾಜು ಯೋಜನೆ ನೇಕಾರರ ಮನೆಗಳಿಗೆ 1000 ಯೂನಿಟ್‌ಗಳಷ್ಟು ಪ್ರತಿ ಎರಡು ತಿಂಗಳಿಗೊಮ್ಮೆ ವಿದ್ಯುತ್ ಸರಬರಾಜು ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಿನ ಬಳಕೆ ಮಾಡುವ ವಿದ್ಯುತ್ ಘಟಕಗಳಿಗೆ ರಿಯಾಯಿತಿ ವಿದ್ಯುತ್ ದರವನ್ನು ಒದಗಿಸಲಾಗುತ್ತಿದೆ.

**ಮಹಾರಾಷ್ಟ್ರ:-**

ಮಹಾರಾಷ್ಟ್ರ ರಾಜ್ಯದಲ್ಲಿ ಜವಳಿ ಕೈಗಾರಿಕಾ ಘಟಕಗಳಿಗೆ Maharashtra Integrated and Sustainable Textile Policy 2023-28 ರಡಿ ರೂ.2.00 ರಿಂದ 3.77 (ಪ್ರತಿ ತಿಂಗಳಿಗೆ ರೂ.40.00 ಲಕ್ಷಗಳವರೆಗೆ) ಗಳನ್ನು 2 ವರ್ಷಗಳ ಅವಧಿಗೆ ಚಾಲ್ತಿಯಲ್ಲಿರುವ ಘಟಕಗಳಿಗೆ ವಿದ್ಯುತ್ ಸಹಾಯಧನವನ್ನು ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಡಿ ಜವಳಿ ಮತ್ತು ಸಿದ್ಧ ಉಡುಪು ಘಟಕಗಳಿಗೆ ವಲಯವಾರು ಈ ಕೆಳಕಂಡಂತೆ ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನವನ್ನು ನೀಡಲಾಗುತ್ತಿದೆ.

**ಜವಳಿ ಕ್ಷೇತ್ರಕ್ಕೆ:-**

| | ಎಂಎಸ್ಎಂಇ | ಬೃಹತ್ |
|---|---|---|
| **ವಿಭಾಗಗಳು** | **ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು** | **ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು** |
| ಸ್ಪಿನ್ನಿಂಗ್ | 5 ವರ್ಷಗಳ ಅವಧಿಗಾಗಿ ರೂ. 2.0ರಂತೆ ವಿದ್ಯುತ್ ವೆಚ್ಚದ ಮರು ಸಂದಾಯ. | 5 ವರ್ಷಗಳ ಅವಧಿಗಾಗಿ ರೂ. 2.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. |
| ನೆಯ್ಗೆ (ಏರ್‌ಜೆಟ್ ಮಗ್ಗಗಳು, ರೇಪಿಯರ್ ಮಗ್ಗಗಳು, ವಿದ್ಯುನ್ಮಾನ ಜಾಕಾರ್ಡ್) | 5 ವರ್ಷಗಳ ಅವಧಿಗಾಗಿ ರೂ. 2.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | 5 ವರ್ಷಗಳ ಅವಧಿಗಾಗಿ ರೂ. 1.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. |

...2

| ಎಂಎಸ್‌ಎಂಇ | | ಬೃಹತ್ |
|---|---|---|
| **ವಿಭಾಗಗಳು** | **ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು** | **ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು** |
| ಸಂಸ್ಕರಣೆಯ ಸಂಯೋಜಿತ ಘಟಕಗಳು | 5 ವರ್ಷಗಳ ಅವಧಿಗಾಗಿ ರೂ. 1.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | 5 ವರ್ಷಗಳ ಅವಧಿಗಾಗಿ ರೂ. 2.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. |
| ತಾಂತ್ರಿಕ ಜವಳಿಗಳು | | 5 ವರ್ಷಗಳ ಅವಧಿಗಾಗಿ ರೂ. 1.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. |
| ಇತರೆ | | |
| ಅಸಂಪ್ರದಾಯಿಕ/ ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ | 5 ವರ್ಷಗಳ ಅವಧಿಗಾಗಿ ರೂ. 2.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. | 5 ವರ್ಷಗಳ ಅವಧಿಗಾಗಿ ರೂ. 2.0ರಂತೆ ಸಂದಾಯ ಮಾಡಿದ ವಿದ್ಯುತ್ ವೆಚ್ಚದ ಮರು ಸಂದಾಯ. |

**ಸಿದ್ಧ ಉಡುಪು ಕ್ಷೇತ್ರಕ್ಕೆ:-**

| ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ವಿದ್ಯುತ್ ಸಹಾಯಧನ | |
|---|---|
| **ಭಾಗಗಳು** | **ವಲಯ 4ನ್ನು ಹೊರತುಪಡಿಸಿ ಎಲ್ಲಾ ವಲಯಗಳು** |
| ಸಿದ್ಧ ಉಡುಪು | 5 ವರ್ಷಗಳ ಅವಧಿಗಾಗಿ 1 ರೂಪಾಯಿ ವಿದ್ಯುತ್ ವೆಚ್ಚದ ಮರುಪಾವತಿಯನ್ನು ಸಂದಾಯ ಮಾಡಿದ |

## ಅನುಬಂಧ-2

## ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ-2025-30

2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-328 ರಲ್ಲಿ "ರಾಜ್ಯದಲ್ಲಿ ಜವಳಿ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜಿಸಲು 2024-29ರ ಅವಧಿಗೆ 10,000 ಕೋಟಿ ರೂ.ಗಳ ಬಂಡವಾಳ ಹೂಡಿಕೆ ಹಾಗೂ 2 ಲಕ್ಷ ಉದ್ಯೋಗಗಳ ಸೃಜನೆಯ ಗುರಿಯೊಂದಿಗೆ ಹೊಸ ಜವಳಿ ನೀತಿಯನ್ನು ಜಾರಿಗೊಳಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.

2025-26 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ:352 **ರಲ್ಲಿ "ರಾಜ್ಯದಲ್ಲಿ ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು ಎರಡು ಲಕ್ಷ ಉದ್ಯೋಗ ಸೃಜಿಸುವ ಉದ್ದೇಶದಿಂದ ನೂತನ ಜವಳಿ ನೀತಿ 2025-30 ನ್ನು ರೂಪಿಸಲಾಗುವುದು"** ಎಂದು ಘೋಷಿಸಲಾಗಿರುತ್ತದೆ.

2024-25ನೇ ಸಾಲಿನ ಆಯವ್ಯಯ ಕಂಡಿಕೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ:15.04.2024ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ನೂತನ ಜವಳಿ ನೀತಿಯನ್ನು ಅನುಷ್ಠಾನಗೊಳಿಸಲು ಉನ್ನತಮಟ್ಟದ ತಜ್ಞರ ಸಮಿತಿಯು ದಿನಾಂಕ:01.08.2024 ರಂದು ಸಭೆ ಸೇರಿ ಹೊಸ ಜವಳಿ ನೀತಿ ತಯಾರಿಸಲು Terms of Reference ನಿಗದಿಪಡಿಸಿದ್ದು, ಅದರನ್ವಯ, ಕರಡು ಜವಳಿ ನೀತಿ ತಯಾರಿಸಲು M/s KPMG Advisory Consultant Services Pvt Ltd. ರವರನ್ನು ನೇಮಕ ಮಾಡಲಾಗಿರುತ್ತದೆ. ಕರಡು ನೀತಿಯನ್ನು ಸಿದ್ಧಪಡಿಸಲು ಅಗತ್ಯ ಕ್ರಮವಹಿಸಲಾಗಿರುತ್ತದೆ.

Drafting of New Textile Policy ಕೈಗೊಳ್ಳಲು ಸಲಹೆಗಾರರೊಬ್ಬರನ್ನು ನೇಮಿಸಲು e-procurement ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.

ಸಲಹೆಗಾರನ್ನಾಗಿ M/s. KPMG Advisory Services Pvt. Ltd. ರವರನ್ನು ಆಯ್ಕೆ ಮಾಡಿ ದಿನಾಂಕ:19.10.2024 ರಂದು Letter of Award ನೀಡಲಾಗಿರುತ್ತದೆ.

ದಿನಾಂಕ:21.02.2025 ರಂದು M/s. KPMG Advisory Services Pvt. Ltd ರವರು ಕರಡು ಜವಳಿ ನೀತಿ ಪ್ರತಿಯನ್ನು ಇ-ಮೇಲ್ ಮುಖಾಂತರ ಸಲ್ಲಿಸಿರುತ್ತಾರೆ.

ದಿನಾಂಕ:24.02.2025 ಹಾಗೂ ದಿನಾಂಕ:27.02.2025 ರಂದು ಅಪರ ನಿರ್ದೇಶಕರು ಹಾಗೂ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ ಇವರ ಅಧ್ಯಕ್ಷತೆಯ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಅಗತ್ಯ ಸಲಹೆ ಮತ್ತು ಬದಲಾವಣೆ ಮಾಡಲು ಸೂಚಿಸಲಾಗಿರುತ್ತದೆ.

ಅದರನ್ವಯ, M/s. KPMG Advisory Services Pvt. Ltd ರವರು ದಿನಾಂಕ:06.03.2025 ಮತ್ತು ದಿನಾಂಕ:17.03.2025 ರಂದು ಬದಲಾವಣೆ ಹಾಗೂ ಸಲಹೆಗಳನ್ನು ಅಳವಡಿಸಿ ಇ-ಮೇಲ್ ಮುಖಾಂತರ ಸಲ್ಲಿಸಿರುತ್ತಾರೆ.

ಮತ್ತೊಮ್ಮೆ ಪರಿಶೀಲಿಸಿದ್ದು, ಬದಲಾವಣೆಗಳನ್ನು ಅಳವಡಿಸಿ ದಿನಾಂಕ:25.04.2025 ರಂದು ಪರಿಷ್ಕೃತ ಕರಡು ಜವಳಿ ನೀತಿಯನ್ನು M/s. KPMG Advisory Services Pvt. Ltd ರವರು ಸಲ್ಲಿಸಿರುತ್ತಾರೆ.

ಸದರಿ ಕರಡು ಜವಳಿ ನೀತಿಯನ್ನು ಅನುಮೋದನೆಗಾಗಿ ದಿನಾಂಕ:13.05.2025 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

...2

M/s KPMG Advisory Services Pvt. Ltd., ರವರು ಉದ್ಯಮಿ ಸ್ನೇಹಿ ಹಾಗೂ ಪರಿಣಾಮಕಾರಿಯಾದ ಜವಳಿ ನೀತಿಯನ್ನು ರೂಪಿಸಲು ಅಗತ್ಯ ಸಲಹೆಗಳನ್ನು ಪಡೆಯುವ ಸಲುವಾಗಿ ವಲಯಮಟ್ಟದ Stakeholders ಸಭೆಯನ್ನು ದಿನಾಂಕ:20.11.2024 ರಂದು ದಕ್ಷಿಣ ವಲಯ ಮತ್ತು ಪೂರ್ವ ವಲಯ ಉದ್ದಿಮೆದಾರರೊಂದಿಗೆ ಬೆಂಗಳೂರಿನಲ್ಲಿ ಹಾಗೂ ದಿನಾಂಕ:22.11.2024 ರಂದು ಪಶ್ಚಿಮ ವಲಯ ಮತ್ತು ಉತ್ತರ ವಲಯ ಉದ್ದಿಮೆದಾರರೊಂದಿಗೆ ಹುಬ್ಬಳ್ಳಿಯಲ್ಲಿ ಸಭೆ ನಡೆಸಿರುತ್ತಾರೆ.

ದಿನಾಂಕ:03.01.2025 ರಂದು ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉದ್ದಿಮೆದಾರರೊಂದಿಗೆ Stakeholders ಸಭೆಯನ್ನು ಆಯೋಜಿಸಲಾಗಿರುತ್ತದೆ.

ಸದರಿ ಸಭೆಗಳಲ್ಲಿ ಅನೇಕ ನೇಕಾರರು/ಉದ್ದಿಮೆದಾರರು ಭಾಗವಹಿಸಿದ್ದು, ಉತ್ತಮ ಸಲಹೆ/ಸೂಚನೆಗಳನ್ನು ನೀಡಿದ್ದು, ಅವುಗಳನ್ನು ಕರಡು ಜವಳಿ ನೀತಿಯಲ್ಲಿ ಅಳವಡಿಸಿ, ಜವಳಿ ಕ್ಷೇತ್ರ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜಿಸಲು, ಉದ್ಯಮಿ ಸ್ನೇಹಿ ಕರಡು ನೂತನ ಜವಳಿ ನೀತಿ 2025-30 ಅನ್ನು ದಿನಾಂಕ:21.02.2025 ರಂದು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ.

ದಿನಾಂಕ:24.02.2025 ಹಾಗೂ ದಿನಾಂಕ:27.02.2025 ರಂದು ಅಪರ ನಿರ್ದೇಶಕರು ಹಾಗೂ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ ಇವರ ಅಧ್ಯಕ್ಷತೆಯ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಅಗತ್ಯ ಸಲಹೆ ಮತ್ತು ಬದಲಾವಣೆ ಮಾಡಲು ಸೂಚಿಸಲಾಗಿರುತ್ತದೆ.

M/s KPMG Advisory Services Pvt. Ltd. ರವರು ಸಮಿತಿಯಲ್ಲಿ ಸೂಚಿಸಲಾಗಿರುವ ಅಂಶಗಳನ್ನು ಅಳವಡಿಸಿ, ದಿನಾಂಕ:06.03.2025 ರಂದು ಕರಡು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2025-30 ನ್ನು ಸಲ್ಲಿಸಿರುತ್ತಾರೆ.

ಜವಳಿ ಆಯುಕ್ತರು M/s KPMG Advisory Services Pvt. Ltd. ರವರೊಂದಿಗೆ ಚರ್ಚಿಸಿ ಕೆಲವು ಅಂಶಗಳನ್ನು ಅಳವಡಿಸುವಂತೆ ಸೂಚಿಸಿರುತ್ತಾರೆ.

ಅದರಂತೆ, ಸದರಿ ಸಂಸ್ಥೆಯವರು ಸೂಚಿಸಲಾಗಿರುವ ಅಂಶಗಳನ್ನು ಅಳವಡಿಸಿ, ದಿನಾಂಕ:25.04.2025 ರಂದು ಕರಡು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2025-30ನ್ನು ಸಲ್ಲಿಸಿರುತ್ತಾರೆ.

ದಿನಾಂಕ:31.05.2025, ದಿನಾಂಕ:21.06.2025 ಹಾಗೂ ದಿನಾಂಕ:04.07.2025 ರಂದು ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರು ಕರಡು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2025-30ನ್ನು ಪರಿಶೀಲಿಸಿದ್ದು, ಕೆಲವು ಅಂಶಗಳನ್ನು ಅಳವಡಿಸುವಂತೆ ಸೂಚಿಸಿರುತ್ತಾರೆ.

ಅದರಂತೆ, ಸದರಿ ಸಂಸ್ಥೆಯವರು ಸೂಚಿಸಲಾಗಿರುವ ಅಂಶಗಳನ್ನು ಅಳವಡಿಸಿ, ದಿನಾಂಕ:05.06.2025, ದಿನಾಂಕ:27.06.2025 ಹಾಗೂ ದಿನಾಂಕ:14.07.2025 ರಂದು ಕರಡು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2025-30ನ್ನು ಸಲ್ಲಿಸಿರುತ್ತಾರೆ.

ಸಿದ್ಧಪಡಿಸಿದ ಕರಡು ನೂತನ ಜವಳಿ ನೀತಿ 2025-30ನ್ನು ದಿನಾಂಕ:31.07.2025, ದಿನಾಂಕ:12.09.2025 ಹಾಗೂ ದಿನಾಂಕ:19.01.2026 ರಂದು ಮಾನ್ಯ ಜವಳಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಮಂಡಿಸಲಾಗಿದ್ದು, ಜವಳಿ ಕ್ಷೇತ್ರದ ಉದ್ದಿಮೆದಾರರು, ನೇಕಾರರು ಹಾಗೂ ನೇಕಾರರ ಸಾಂದ್ರತೆಯಿರುವ ಪ್ರದೇಶದ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಪಡೆದುಕೊಂಡು ಕರಡು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2026-31 ನ್ನು ಸಿದ್ಧಪಡಿಸಲಾಗಿದ್ದು, ಶೀಘ್ರದಲ್ಲೇ ಅನುಷ್ಠಾನಗೊಳಿಸಲಾಗುವುದು.

K. Jyothi 23/1/2026

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ